## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:2034/2021

**ಸಾಕ್ಷಿಯನ್ನು ದಿಃ 04.10.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಸಯ್ಯದ್ ಶಬಾನ್ | ಸಿಡಬ್ಲ್ಯೂ:3 | ಪಿಡಬ್ಲ್ಯೂ:3 |
| ತಂದೆಯ ಹೆಸರು | ಸಯ್ಯದ್ ಅಹಮ್ಮದ್ | | |
| ವಯಸ್ಸು | 28 ವರ್ಷ | | |
| ಉದ್ಯೋಗ | ಗ್ಯಾರೇಜ್ ಕೆಲಸ | | |
| ವಾಸಸ್ಥಳ | ನರಸಿಂಹಸ್ವಾಮಿ ಬಡಾವಣೆ,<br>ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ 1 ನನ್ನ ಸ್ನೇಹಿತನಿದ್ದು ಅವರು ನನಗೆ ಗೊತ್ತು. ಚಾಸಾ 2 ಅಕಾಶ್ ಪವಾರ್, ಚಾಸಾ 5 ವಿನೋದ್ ನನಗೆ ಗೊತ್ತು. 31.01.2017 ರಂದು ನಾನು ಮತ್ತು ಚಾಸಾ 4 ಹಬೀಬ್ ರೆಹಮಾನ್ ರವರು ಹುಣಸೂರಿನ ಬಜಾರ್ ರಸ್ತೆಯಲ್ಲಿ ಗ್ಯಾರೇಜ್ ಕೆಲಸಕ್ಕೆಂದು ಹೋಗುತ್ತಿದ್ದೇವು. ಆಗ ಸಮಯ ಬೆಳಗ್ಗೆ 11.00 ಗಂಟೆ ಆಗಿತ್ತು. ಚಾಸಾ 1 ಉಮರುದ್ದಿನ್ ರವರು ನನಗೆ ಸಿಕ್ಕಿ ಅವರು ಮೊಬೈಲ್ ಅನ್ನು ತೋರಿಸಿ ಅಕಾಶ್ ಪವಾರ್ ರವರ ಪೆಸ್ ಬುಕ್ ನಲ್ಲಿ ಮೆಕ್ಕಾ ಮಸೀದಿಯ ಪೋಟೊ ಮೇಲೆ ನಮಾಜ್ ಮಾಡುತ್ತಿರುವ ವ್ಯಕ್ತಿಯ ಹಿಂದೆ ಒಂದು ಹಂದಿ ಹತ್ತಿರುವ ಹಾಗೆ ಪೋಟೊ ಟ್ಯಾಗ್ ಮಾಡಿರುವುದು ತೋರಿಸಿದರು. ನಂತರ ಈ ವಿಚಾರವಾಗಿ ಚಾಸಾ 1 ರವರು ದೂರನ್ನು ಕೊಟ್ಟಿರುತ್ತಾರೆ. ಉಮರುದ್ದಿನ್ ಖಾನ್ ಚಾಸಾ 1 ರವರ ಮೊಬೈಲ್ ನಲ್ಲಿ ಪೋಟೊ ನೋಡಿರುತ್ತೇನೆ.

03.03.2017 ರಂದು ಪೊಲೀಸ್ ಠಾಣೆಗೆ ಕರೆದು ಆರೋಪಿ ಯೊಗೇಶ್ ಚೌಹಾನ್ ರವರು ಅಕಾಶ್ ಪವಾರ್ ರವರ ಹೆಸರಿನಲ್ಲಿ ಫೇಸ್ ಬುಕ್ ಅಕೌಂಟ್ ಕ್ರಿಯೇಟ್ ಮಾಡಿ ಹಾಗೆ ಟ್ಯಾಗ್ ಮಾಡಿದ್ದರು ಎಂದು ತಿಳಿಸಿದರು. ಅದರಿಂದ ನಮ್ಮ ಮುಸ್ಲಿಂ ಸಮುದಾಯಕ್ಕೆ ಧಕ್ಕೆ ಬರುವಂತಹ ಚಿತ್ರ ಪೋಸ್ಟ ಮಾಡಿದ್ದಾರೇಂದು ಗೊತ್ತಾಯಿತು. ಆರೋಪಿಯನ್ನು ಠಾಣೆಯಲ್ಲಿ ಪೊಲೀಸರು ತೋರಿಸಿದ್ದರು. ಸದರಿ ಅವರು ಈ ದಿನ ನ್ಯಾಯಾಲಯದಲ್ಲಿ ಇದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ. ಈ ವಿಚಾರವಾಗಿ ಮೇಲೆ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ**

ಶ್ರೀ ಆರ್.ಕೆ.ಆರ್ ಹಾಜರಿದ್ದು, ಕಾಲಾವಕಾಶ ಕೋರಿರುತ್ತಾರೆ. ಆದರೆ ನೀಡಲು ಸಕಾರಣಗಳು ಇಲ್ಲದ್ದರಿಂದ, ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.